(ಇಂದು ದಿನಾಂಕ 08-01-2021 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು - ವಾದಿ ಪರ ಶ್ರೀ ವಿ.ಜಿ.ಎಚ್. ವಕೀಲರಿಂದ-**

**8.** ನನ್ನ ತಂದೆಯವರ ಕಾಲಾನಂತರ ದಾವಾ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ವಾರಿಸಾ ಪ್ರಕರಣ ನಡೆಯಿತಾ ಎಂದರೆ ಮರಣಾ ನಂತರ ಆಗಿರುವುದಿಲ್ಲ, ಆದರೆ 2 ವರ್ಷಗಳ ಬಳಿಕ ಮೇಲ್ಮನವಿಯನ್ನು ಸಹಾಯಕ ಆಯುಕ್ತರ ನ್ಯಾಯಾಲಯದಲ್ಲಿ ಸಲ್ಲಿಸಿರುತ್ತಾರೆ. ನನ್ನ ತಂದೆಯವರ ಕಾಲಾನಂತರ ನನ್ನ ತಾಯಿಯವರು ಮಾತ್ರ ವಾರಸುದಾರರು ಎಂದು ಕಂದಾಯ ಇಲಾಖೆಯ ಸಂಬಂಧಪಟ್ಟ ಕಚೇರಿಗೆ ನಾನು ಅರ್ಜಿಯನ್ನು ನೀಡಿದ್ದೆ ಎಂದರೆ ಸರಿಯಲ್ಲ.

**9.** ಆರ್.ಟಿ.ಎಸ್.ಕೆ.ಪಿ.ಎಸ್.ಆರ್. 50/2009-10 ರ ಪ್ರಕರಣ ನನ್ನ ವಿರುದ್ಧ ದಾಖಲಿಸಲಾಗಿತ್ತು ಎಂದರೆ ಸರಿ. ಸದರಿ ಪ್ರಕರಣದಲ್ಲಿ ನನ್ನ ವಿರುದ್ಧ ಅದೇಶ ಆಗಿದೆ ಎಂದರೆ ಸಾಕ್ಷಿಯು ಸದರಿ ಅರ್ಜಿಯನ್ನು ಏಕಪಕ್ಷೀಯವಾಗಿ ತೀರ್ಮಾನಿಸಲಾಗಿರುತ್ತದೆ. ಸಾಕ್ಷಿಯು ಮುಂದುರವೆದು ಸದರಿ ಪ್ರಕರಣದಲ್ಲಿ ನನಗೆ ಯಾವುದೇ ನೋಟಿಸ್ ಅಥವಾ ಸಮನ್ಸನ್ನು ಜಾರಿ ಮಾಡದೇ ತೀರ್ಮಾನ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸಾಕ್ಷಿಗೆ ಸದರಿ ಪ್ರಕರಣದ ಆದೇಶದ ನೋಟರಿಕೃತ ಪ್ರತಿಯನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿ ಒಪ್ಪಿದ್ದು, ಸಾಕ್ಷಿಯು ದಾಖಲಾತಿಯನ್ನು ಒಪ್ಪಿದ ಕಾರಣ ಅದನ್ನು ನಿ.ಪಿ.10 ಎಂದು ಗುರುತಿಸಲಾಯಿತು. ಸದರಿ ಪ್ರಕರಣದಲ್ಲಿ ನಾನು ವಕೀಲರಿಂದ ಪ್ರತಿನಿಧಿಸಲ್ಪಟ್ಟಿದ್ದೆ ಎಂದರೆ ಸಾಕ್ಷಿಯು ನಾನೇ ಸ್ವತಃ ಹಾಜರಾಗಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಆದೇಶದ ಮೇರೆಗೆ ಕಂದಾಯ ದಾಖಲಾತಿಗಳಲ್ಲಿ ಹೆಸರುಗಳನ್ನು ಆದೇಶದಲ್ಲಿ ನಮೂದಿಸಿರುವಂತೆ ದಾಖಲು ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು ಸಂಬಂಧಪಟ್ಟ ಇಲಾಖೆಗೆ ಸ್ವತ್ತುಗಳಿಗೆ ಸಂಬಂಧಪಟ್ಟಂತೆ ನ್ಯಾಯಾಲಯದಲ್ಲಿ ವ್ಯಾಜ್ಯ ಇರುವ ಕಾರಣ ಯಾವುದೇ ಹೆಸರು ಬದಲಾವಣೆ ಮಾಡದಂತೆ ತಕರಾರು ನೀಡಿದ್ದರೂ ಸಹ ನಮೂದು ಮಾಡಿರುತ್ತಾರೆ ಎಂದು ನುಡಿಯುತ್ತಾರೆ.

**10.** 7 ನೇ ಪ್ರತಿವಾದಿ ಅಸಲು ದಾವಾ ಸಂಖ್ಯೆ 97/2012 ರ ರೀತ್ಯಾ ವಿಭಾಗವನ್ನು ಕೋರಿ ದಾವೆ ಸಲ್ಲಿಸಿದ್ದರು ಎಂದರೆ ಸರಿ. ಸದರಿ ದಾವೆಯಲ್ಲಿ ಎಲ್ಲರಿಗೂ ಹಿಸ್ಸೆ ಇದೆ ಎಂದು ತೀರ್ಮಾನ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ನನ್ನ ತಂದೆಯವರಿಂದ ಒಂದು ಮೊಕ್ತ್ಯಾರುನಾಮೆಯನ್ನು ಪಡೆದುಕೊಂಡಿದ್ದೆ ಎಂದರೆ ಸಾಕ್ಷಿಯು ದಾವಾ ಸಂಖ್ಯೆ 96/1991

ರಲ್ಲಿ ನನ್ನ ತಂದೆಯವರು ಅವರ ಪರವಾಗಿ ದಾವೆ ನಡೆಸಲು ಮೊಕ್ತ್ಯಾರುನಾಮೆಯನ್ನು ಬರೆದುಕೊಟ್ಟಿದ್ದರು, ಅದನ್ನು ಹೊರತುಪಡಿಸಿ ಇತರೆ ಯಾವುದೇ ಮೊಕ್ತ್ಯಾರುನಾಮೆಯನ್ನು ನನ್ನ ಪರವಾಗಿ ಬರೆದುಕೊಟ್ಟಿರುವುದಿಲ್ಲ. ಸದರಿ ಮೊಕ್ತ್ಯಾರುನಾಮೆಯನ್ನು ನನ್ನ ತಂದೆಯವರಿಂದ ಬರೆಯಿಸಿಕೊಳ್ಳುವ ಸಂದರ್ಭದಲ್ಲಿ ಆ ಬಗ್ಗೆ ನನ್ನ ಸಹೋದರ – ಸಹೋದರಿಯರಿಗೆ ವಿಚಾರವನ್ನು ತಿಳಿಸಿದ್ದೀರಾ ಎಂದರೆ, ವಿಚಾರ ತಿಳಿಸಲು ಅವರ ವಾಸ್ತವ್ಯ ಹಾಗೂ ವಿಳಾಸ ನನಗೆ ತಿಳಿದಿರಲಿಲ್ಲ ಎಂದು ನುಡಿಯುತ್ತಾರೆ.

11. ಗೋಕರ್ಣದ ಕೋಟಿತೀರ್ಥದ ರಸ್ತೆಯ ಪಕ್ಕಕ್ಕೆ ತಾಗಿದಂತೆ ನನ್ನ ಮನೆ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಕೋಟಿತೀರ್ಥದ ಉತ್ತರ ಭಾಗದಲ್ಲಿರುವ ರಸ್ತೆಯ ಬಳಿ ನನ್ನ ಮನೆ ಬರುತ್ತದೆ ಎಂದು ನುಡಿಯುತ್ತಾರೆ. ಸದರಿ ನಮ್ಮ ಮನೆಯಲ್ಲಿ ಅನಾದಿ ಕಾಲದಿಂದಲೂ ಹಿರಿಯರ ಪಿತೃ ಕಾರ್ಯ ನಡೆಸುತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಪೌರೋಹಿತ್ಯ ಕೆಲಸಗಳನ್ನು ಮಾಡುತ್ತಿದ್ದರು ಎಂದು ನುಡಿಯುತ್ತಾರೆ.

12. ನನ್ನ ತಂದೆಯವರ ಹೆಸರಿನಲ್ಲಿದ್ದ 15 ಲಕ್ಷ ರೂಪಾಯಿಗಳನ್ನು ಮೇಲೆ ತಿಳಿಸಿದ ಮೊಕ್ತ್ಯಾರುನಾಮೆಯ ಆಧಾರದ ಮೇರೆಗೆ ನಾನು ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ.

ಅದಕ್ಕೆ ಸಂಬಂಧಪಟ್ಟಂತೆ ಕೆನರಾ ಬ್ಯಾಂಕಿನ ಪಾಸಬುಕನ್ನು ಹಾಗೂ ಎಕೌಂಟ ಸಂಬಂಧ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ಗೋಕರ್ಣದ ಬ್ಯಾಂಕಿನಲ್ಲಿ ಇರುವ ನಮಗೆ ಸಂಬಂಧಪಟ್ಟ ಖಾತೆಗಳ ದಾಖಲಾತಿಗಳನ್ನು ಹಾಜರುಪಡಿಸಲು ನನಗೆ ತೊಂದರೆ ಇಲ್ಲ. ನಾನು ನನ್ನ ತಂದೆ ಮತ್ತು ತಾಯಿಯವರ ಕಾರ್ಯದ ಸಂದರ್ಭದಲ್ಲಿನನ್ನ ಸಹೋದರ ಮತ್ತು ಸಹೋದರಿಯರಿಗೆ ಧರ್ಮ ಕಾಷ್ಟವನ್ನು ಸಹ ಹಾಕಲು ಅವಕಾಶವನ್ನು ಮಾಡಿಕೊಟ್ಟಿರುವುದಿಲ್ಲ ಎಂದರೆ ಸರಿಯಲ್ಲ.

13. ವಾದಿಯ ಗಂಡನ ಮನೆ ಗೋಕರ್ಣ ಎಂದರೆ ನನಗೆ ಗೊತ್ತಿಲ್ಲ. ಸ್ವತ್ತುಗಳನ್ನು ಸಂಪೂರ್ಣವಾಗಿ ಪಡೆದುಕೊಳ್ಳಬೇಕು ಎಂಬ ದುರುದ್ದೇಶದಿಂದ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ – ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಪ್ರಧಾನ ಸಿವಿಲ್ ಜಡ್ಜ, ಕುಮಟಾ